# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 17.01.2025ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2025ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ ಪಿ. ಎಲ್.ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಪರಿಣಿತ<br>ಡೀನರು, ಕಲಾ ನಿಕಾಯ | ಸದಸ್ಯರು |
| 3. | ಡಾ ಎಸ್.ಬಿ ಎಂ. ಪ್ರಸನ್ನ | ಸದಸ್ಯರು |
| 4. | ಡಾ ಕೆ.ಸಿ. ಮಹದೇಶ | ಸದಸ್ಯರು |
| 5. | ಡಾ ವರದರಾಜ ಸಿ. ಎಚ್. | ಸದಸ್ಯರು |
| 6. | ಡಾ. ಶಂಕರಮೂರ್ತಿ ಎಚ್.ಕೆ. | ಸದಸ್ಯರು |
| 7. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 8. | ಶ್ರೀ. ಸಿ.ಎ. ನಿತಿನ್ ಜೆ ಶೆಟ್ಟಿ | ಸದಸ್ಯರು |
| 9. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 10. | ಶ್ರೀ ರಘುರಾಜ್ | ಸದಸ್ಯರು |
| 11. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು |
| 12. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು |
| 13. | ಪ್ರೊ ಹೆಚ್. ದೇವೆಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 14. | ಪ್ರೊ ಸಂಗಪ್ಪ ವೈ.<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 15. | ಶ್ರೀ ಕೆ. ರಾಜು ಮೊಗವೀರ, ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

| | | |
|---|---|---|
| 1. | ಡಾ. ರಾಮೇಗೌಡ ಎಂ.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 2. | ಡಾ. ಸಂದೇಶ್ ಕೆ.ಎಸ್.,<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |

## <u>ಪ್ರಾರಂಭಿಕ</u>

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

## ಪ್ರಾಸ್ತಾವಿಕ

**ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರಿಗೆ ಹೊಸ ವರ್ಷದ ಹಾಗೂ ಸಂಕ್ರಾಂತಿಯ ಶುಭಾಶಯಗಳನ್ನು ಕೋರುತ್ತಾ, ಈ ವರ್ಷದ ಪ್ರಥಮ ಸಿಂಡಿಕೇಟ್ ಸಭೆಗೆ ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.**

**ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.**

1. ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಸಿಂಡಿಕೇಟು ಸಭೆಗೆ ಹಾಜರಾಗುತ್ತಿರುವ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ದಿನಾಂಕ 03.01.2025 ರ ಪತ್ರದಲ್ಲಿ ಸಿಂಡಿಕೇಟು ಸಭೆಯ ಸಭಾ ಘನತೆ ಕಾಪಾಡುವ ನಿಟ್ಟಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆ 2000, ಪರಿನಿಯಮ ಹಾಗೂ ಮಾನ್ಯ ಕುಲಾಧಿಪತಿಗಳ ಮಾರ್ಗಸೂಚಿ ಇವುಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವ ಬಗ್ಗೆ ಎಲ್ಲಾ ಸದಸ್ಯರ ಗಮನಕ್ಕೆ ತರುವಂತೆ ಅಭಿಪ್ರಾಯಿಸಿದ್ದು, ಸದರಿ ಪತ್ರವನ್ನು ಸಭೆಯಲ್ಲಿ ಓದಲಾಯಿತು.

2. ಮಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವವನ್ನು ನಡೆಸಲು ಮಾನ್ಯ ಕುಲಾಧಿಪತಿಗಳು 2025ರ ಮಾರ್ಚ್ ಕೊನೆಯ ವಾರದಲ್ಲಿ ದಿನಾಂಕ ನಿಗದಿಪಡಿಸುವ ಸಾಧ್ಯತೆ ಇದೆ ಎಂಬುದಾಗಿ ಸಭೆಗೆ ತಿಳಿಸಲಾಯಿತು.

3. ಪ್ರಪ್ರಥಮ ಬಾರಿಗೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು 2025ರ ಫೆಬ್ರವರಿ 2ನೇ ವಾರದಲ್ಲಿ ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು.

4. ಪ್ರತಿ ವರ್ಷದಂತೆ ಈ ವರ್ಷದ ಪ್ರಥಮ ರಕ್ತದಾನ ಶಿಬಿರವನ್ನು ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ಜಸ್ಟೀಸ್ ಕೆ.ಎಸ್. ಹೆಗ್ಡೆ ಆಸ್ಪತ್ರೆಯ ಸಹಯೋಗದೊಂದಿಗೆ ದಿನಾಂಕ 16.01.2025 ರಂದು ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಸಲಾಯಿತು. ಅಧ್ಯಾಪಕರು, ಆಡಳಿತ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸೇರಿ ಸುಮಾರು 112 ಮಂದಿ ಈ ಶಿಬಿರದಲ್ಲಿ ರಕ್ತದಾನ ಮಾಡಿರುವುದಾಗಿ ತಿಳಿಸಲಾಯಿತು.

5. ಇತ್ತೀಚೆಗೆ ತಮಿಳುನಾಡಿನ ವೆಲ್ಲೂರಿನ VIT ಯಲ್ಲಿ AIU ಸಂಘಟಿಸಿದ್ದ ದಕ್ಷಿಣ ವಲಯ ಕುಲಪತಿಗಳ ಸಮ್ಮೇಳನದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಮಾನ್ಯ ಕುಲಪತಿಯವರು ಭಾಗವಹಿಸಿ, ಸಾರ್ವಜನಿಕ ವಿಶ್ವವಿದ್ಯಾನಿಲಯಗಳ ಕಾರ್ಯ ಚಟುವಟಿಕೆಗಳಿಗೆ ಸರ್ಕಾರ, UGC ಹಾಗೂ AIU ಯಾವ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕು ಎಂಬುವ ಬಗ್ಗೆ ವಾದ ಮಂಡಿಸಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

6. ಮಾನ್ಯ ಉನ್ನತ ಶಿಕ್ಷಣ ಸಚಿವರು ಉಡುಪಿ ಜಿಲ್ಲೆಯ ಬೆಳಪುವಿನಲ್ಲಿ ನಿರ್ಮಿಸಲಾಗುತ್ತಿರುವ ಸ್ನಾತಕೋತ್ತರ ಅಧ್ಯಯನ ಮತ್ತು ಅತ್ಯಾಧುನಿಕ ಸಂಶೋಧನಾ ಕೇಂದ್ರಕ್ಕೆ ದಿನಾಂಕ 07.01.2025 ರಂದು ಭೇಟಿ ನೀಡಿ ಪರಿಶೀಲನೆ ನಡೆಸುವುದಾಗಿ ತಿಳಿಸಿದ್ದು, ಅಂತೆಯೇ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಸ್ವಾಗತಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ ಜಿಲ್ಲೆಗೆ ಮಾನ್ಯ ಉಪರಾಷ್ಟ್ರಪತಿಗಳ ಭೇಟಿ ಇದ್ದ ಕಾರಣ ಸಮಯದ ಅಭಾವದಿಂದಾಗಿ ಬೆಳಪು ಕೇಂದ್ರದ ಭೇಟಿಯನ್ನು ರದ್ದುಗೊಳಿಸಿರುತ್ತಾರೆ. ಅಂದು ಮಾನ್ಯ ಸಚಿವರೊಂದಿಗೆ ಬೇರೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ, ಬೆಳಪುವಿನ ಕಾಮಗಾರಿಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಲಾಗಿದ್ದು, ಆದಷ್ಟು ಶೀಘ್ರವಾಗಿ ಸದರಿ ಕೇಂದ್ರವನ್ನು ಬಳಕೆಗೆ ಯೋಗ್ಯವಾಗಿಸುವಂತೆ ಮಾಡಲು ಅಗತ್ಯವಿರುವ ಅನುದಾನದ ಬಿಡುಗಡೆಗೆ ಸಹಕರಿಸುವುದಾಗಿ ಭರವಸೆಯನ್ನು ನೀಡಿರುತ್ತಾರೆ ಎಂಬುದಾಗಿ ತಿಳಿಸಲಾಯಿತು.

7. ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪ್ರಧಾನ ಭಾಷಣವನ್ನು ನೀಡಲು ಹಿರಿಯ ವಿಜ್ಞಾನಿ, ಖ್ಯಾತ ಶಿಕ್ಷಣ ತಜ್ಞ, ಸಂಶೋಧಕ ಹಾಗೂ ಆಡಳಿತಗಾರರಾದ ಪ್ರೊ. ವಿ.ಎನ್. ರಾಜಶೇಖರನ್ ಪಿಳ್ಳೈ ಇವರನ್ನು, ಅವರು ತಪ್ಪಿದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಯವರಾದ ಪ್ರೊ. ಹೆಚ್. ಪಿ. ಕಿಂಚಾ ಇವರನ್ನು ಆಹ್ವಾನಿಸಲು ಸಭೆಯ ಒಪ್ಪಿಗೆಯನ್ನು ಪಡೆಯಲಾಯಿತು.

8. ಈ ವರ್ಷದ ವಾರ್ಷಿಕ ಘಟಿಕೋತ್ಸವದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಗಾಗಿ ಸ್ವೀಕೃತಗೊಂಡಿರುವ 12 ಮಂದಿ ಗಣ್ಯರ ಹೆಸರುಗಳನ್ನು ಸಭೆಗೆ ತಿಳಿಸಲಾಯಿತು. ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಆಯ್ಕೆ ಸಮಿತಿಗೆ ವಿಶ್ವವಿದ್ಯಾನಿಲಯದ ನಾಮನಿರ್ದೇಶಿತ ಸದಸ್ಯರ ಹೆಸರನ್ನು ಸಭೆಯ ಗಮನಕ್ಕೆ ತರಲಾಯಿತು.

9. ಶೀಘ್ರದಲ್ಲಿ ವಿಧಾನ ಸಭಾಧ್ಯಕ್ಷರನ್ನು ಒಳಗೊಂಡಂತೆ ಜಿಲ್ಲೆಯ ಜನಪ್ರತಿನಿಧಿಗಳ ಹಾಗೂ ಸಿಂಡಿಕೇಟು ಸದಸ್ಯರುಗಳ ಸಭೆಯನ್ನು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಆಯೋಜಿಸುವುದಾಗಿ ಸಭೆಗೆ ತಿಳಿಸಲಾಯಿತು.

**I. ನಡವಳಿಗಳ ದೃಢೀಕರಣ**

**ದಿನಾಂಕ 09.12.2024ರಂದು ನಡೆದ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ : ಎಸಿಸಿ:ಸಾ.ಸ.7.1(2024) ಸಂಬಂಧಿಸಿ ತಿದ್ದುಪಡಿ ನಿರ್ಣಯ:**

**ವಿಷಯ:** ಶೈಕ್ಷಣಿಕ ವರ್ಷ 2025-26ನೇ ಸಾಲಿನ ಕಾಲೇಜುಗಳ ಸಂಯೋಜನಾ ಶುಲ್ಕದ ಬಗ್ಗೆ.

**ತಿದ್ದುಪಡಿ ನಿರ್ಣಯ:** ಶೈಕ್ಷಣಿಕ ವರ್ಷ 2025-26ನೇ ಸಾಲಿನ ಕಾಲೇಜುಗಳ ಸಂಯೋಜನ ಶುಲ್ಕದ ಬಗ್ಗೆ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ.ಮಹದೇಶ ಮತ್ತು ಡಾ.ಎಸ್.ಬಿ.ಎಂ. ಪ್ರಸನ್ನ ಇವರು ಪ್ರತಿ ವರ್ಷ ಕಾಲೇಜುಗಳ ಸಂಯೋಜನಾ ಶುಲ್ಕವನ್ನು ಸಿಂಡಿಕೇಟು ಸಭೆಯ ನಿರ್ಣಯದಂತೆ ಪರಿಷ್ಕರಿಸಲು ಕೋರಿರುತ್ತಾರೆ.

**II. ದಿನಾಂಕ 30.12.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ**

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:9 (2024)

**ವಿಷಯ-3:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ವಿದ್ಯುತ್ ಬಳಕೆಯಲ್ಲಿ ಸೋಲಾರ್ ವಿದ್ಯುತ್ತನ್ನು ಎಷ್ಟು ಬಳಸಲಾಗುತ್ತಿದೆ ಮತ್ತು ಪ್ರತಿವರ್ಷ ಎಷ್ಟು ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲಾಗುತ್ತಿದೆ, 2020 ರಿಂದ 2024 ರವರೆಗೆ ಸೋಲಾರ್ ವಿದ್ಯುತ್ ಇದ್ದರೂ ವಿದ್ಯುತ್ ಬಿಲ್ ಪಾವತಿ ಈವರೆಗೆ ಎಷ್ಟು ಮಾಡಲಾಗಿದೆ. ಚರ್ಚಿಸಿ ನಿರ್ಣಯಿಸಲು ಕೋರಿದೆ.

**ತಿದ್ದುಪಡಿ ನಿರ್ಣಯ:** ಸೋಲಾರ್ ವಿದ್ಯುತ್ ಘಟಕವಿದ್ದರೂ ಹೆಚ್ಚಿನ ವಿದ್ಯುತ್ ಪಾವತಿಸುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದ ವಿಚಾರವಾಗಿ ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿರುವ ಸೋಲಾರ್ ವಿದ್ಯುತ್ ಘಟಕದ ಸಾಮರ್ಥ್ಯವನ್ನು ವೃದ್ಧಿಸುವ ನಿಟ್ಟಿನಲ್ಲಿ, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹೆಚ್ಚುವರಿ ಸೋಲಾರ್ ವಿದ್ಯುತ್ ಘಟಕಗಳ ಸ್ಥಾಪಿಸುವ ಬಗ್ಗೆ ಸಂಬಂಧಪಟ್ಟವರ ಜೊತೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

**ವಿಷಯ - 4:** 2024-25 ರ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಪಾಲಿಸಬೇಕಾದ ನಿಯಮಗಳು ಪಾಲಿಸಲಾಗಿದೆಯೆ? ಸಿಂಡಿಕೇಟಿನ ಅನುಮತಿ ಪಡೆದು ನೇಮಕಾತಿ ಮಾಡಲಾಗಿದೆಯಾ? ನೇಮಕಾತಿ ಪಟ್ಟಿಯನ್ನು ಸಿಂಡಿಕೇಟಿನಲ್ಲಿ ಇಟ್ಟು ಅನುಮತಿ ಪಡೆಯಲಾಗಿದೆಯಾ? 2000 ಆಕ್ಟನ ಪ್ರಕಾರ ಅತಿಥಿ ಉಪನ್ಯಾಸಕರ ಮತ್ತು ತಾತ್ಕಾಲಿಕ ನೌಕರರ ನೇಮಕಾತಿಯಲ್ಲಿ ಸಿಂಡಿಕೇಟಿನ ಪಾತ್ರವನ್ನು ಚರ್ಚಿಸಿ ನಿರ್ಣಯಿಸಲು ಕೋರಿದೆ.

**ತಿದ್ದುಪಡಿ ನಿರ್ಣಯ:** ಅತಿಥಿ ಉಪನ್ಯಾಸಕರ ಮತ್ತು ತಾತ್ಕಾಲಿಕ ನೌಕರರ ನೇಮಕಾತಿ ಸಂದರ್ಭದಲ್ಲಿ ಪ್ರತಿ ವರ್ಷ ಯುಜಿಸಿ ನಿಯಮಾವಳಿಗಳು, ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆ 2000 ಹಾಗೂ ಸರ್ಕಾರದ ನಿಯಮಾವಳಿಯಂತೆ ಸಿಂಡಿಕೇಟು ಸಭೆಯ ಅನುಮೋದನೆ ಪಡೆದು ನೇಮಕಾತಿ ಮಾಡಲು ತೀರ್ಮಾನಿಸಲಾಯಿತು.

2025-26ನೇ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿಯ ಸಂದರ್ಭದಲ್ಲಿ ಕಾರ್ಯಭಾರ ವಿಶ್ಲೇಷಣೆ ಮಾಡುವ ಸಮಿತಿಯ ವರದಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಿ ಅನುಮೋದನೆ ಪಡೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.8:12(2024)

**ವಿಷಯ:** ಡಾ.ರಾಜೇಂದ್ರ ಆರ್., ಸಹ ಪ್ರಾಧ್ಯಾಪಕರು ಹಾಗೂ ಡಾ.ಬಿಷ್ಟಪ್ಪ ಹನುಮಂತಪ್ಪ ತಳವಾರ್, ಸಹ ಪ್ರಾಧ್ಯಾಪಕರು, ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ ಇವರು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ವರ್ಗಾವಣೆ ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

**ತಿದ್ದುಪಡಿ ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕೊಡಗು ವಿಶ್ವವಿದ್ಯಾನಿಲಯದಿಂದ ವರ್ಗಾವಣೆ ಕೋರಿ ಬಂದಿರುವ ನಾಲ್ಕು ಅರ್ಜಿದಾರರ (ಡಾ, ರಾಜೇಂದ್ರ ಆರ್., ಡಾ. ಬಿಷ್ಟಪ್ಪ ಹನುಮಂತಪ್ಪ ತಳವಾರ್, ಮೇಜರ್ ರಾಘವ, ಡಾ. ತಿಪ್ಪೇಸ್ವಾಮಿ) ಮನವಿಗೆ ಸಂಬಂಧಿಸಿ ಕೊಡಗು ವಿಶ್ವವಿದ್ಯಾನಿಲಯದಿಂದ NOC ಪಡೆದುಕೊಂಡು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲು ತೀರ್ಮಾನ ಕೈಗೊಳ್ಳಲಾಯಿತು.

**ಇತರ ವಿಷಯ- 4 ತಿದ್ದುಪಡಿ ನಿರ್ಣಯ :** ಮಾನ್ಯ ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಸಲಹೆ ಮೇರೆಗೆ, ವಿಶ್ವವಿದ್ಯಾನಿಲಯದ ಅಧಿಕೃತ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಯ Hard Copy ಗಳನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ಕಳುಹಿಸುವುದರೊಂದಿಗೆ ನಿಯೋಜಿತ ಕಾರ್ಯಕ್ರಮ ಸಂಯೋಜನಾ ಅಧಿಕಾರಿಗಳು ಸಿಂಡಿಕೇಟು ಸದಸ್ಯರನ್ನು ತಪ್ಪದೇ ದೂರವಾಣಿಯ ಮೂಲಕವೂ ಸಂಪರ್ಕಿಸಿ ಆಹ್ವಾನಿಸುವಂತೆ ನಿರ್ಣಯಿಸಲಾಯಿತು.

**ಇತರ ವಿಷಯ- 7 ತಿದ್ದುಪಡಿ ನಿರ್ಣಯ :** ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ.ಮಹದೇಶ ಇವರ ಸಲಹೆ ಮೇರೆಗೆ Pension Fund ಮತ್ತು Gratuity Fund ನ್ನು ಪ್ರಾರಂಭಿಸುವ ಬಗ್ಗೆ ಭಾರತೀಯ ಜೀವವಿಮಾ ನಿಗಮ (ಎಲ್.ಐ.ಸಿ.) ಅಧಿಕಾರಿಗಳ ಜೊತೆ ಚರ್ಚಿಸಿ, ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

**ಉಳಿದಂತೆ ನಡವಳಿಯನ್ನು ದೃಢೀಕರಿಸಲಾಯಿತು**

**II. ಅನುಸರಣಾ ವರದಿಯ ಅನುಮೋದನೆ**

**1) ದಿನಾಂಕ 09.12.2024ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು -**

**III. ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು.**

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.1:1 (2025) |
| ವಿಷಯ: | ಶೈಕ್ಷಣಿಕ ವರ್ಷ 2024-25ನೇ ಸಾಲಿಗೆ ನಿಗದಿಪಡಿಸಿರುವ ವಿವಿಧ ಶುಲ್ಕಗಳ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶರವರ ಸಲಹೆಯಂತೆ ಮುಂದಿನ ಶೈಕ್ಷಣಿಕ ವರ್ಷದ ಆರಂಭದ ಪೂರ್ವದಲ್ಲಿಯೇ ಶುಲ್ಕ ಪರಿಷ್ಕರಣೆ ಸಮಿತಿಯ ವರದಿಯನ್ನು ಸಿಂಡಿಕೇಟಿನ ಅನುಮೋದನೆ ಪಡೆದು ಕಾರ್ಯರೂಪಕ್ಕೆ ತರುವಂತೆ ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಹಣಕಾಸು:ಸಾ.ಸ.1:2 (2025) |
| ವಿಷಯ: | ಉಡುಪಿ ಜಿಲ್ಲೆ ಕಾಪು ತಾಲೂಕಿನ ಬೆಳಪುವಿನಲ್ಲಿ ನಿರ್ಮಿಸಲಾಗುತ್ತಿರುವ ಸ್ನಾತಕೋತ್ತರ ಅಧ್ಯಯನ ಮತ್ತು ಅತ್ಯಾಧುನಿಕ ಸಂಶೋಧನಾ ಕೇಂದ್ರ ಸ್ಥಾಪನೆಗೆ ಬಿಡುಗಡೆಯಾದ ಅನುದಾನ ಹಾಗೂ ವ್ಯಯಿಸಿದ ಮೊತ್ತದ ಬಗ್ಗೆ. |
| **ನಿರ್ಣಯ:** | ವಿಶ್ವವಿದ್ಯಾನಿಲಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಕಾಲಮಿತಿಯೊಳಗೆ ರೂ. 7.5 ಕೋಟಿ ಮೊತ್ತವನ್ನು ಮರುಭರಣೆ ಮಾಡಲು ಸಾಧ್ಯವಿಲ್ಲದಿರುವುದರಿಂದ ಹಂತ ಹಂತವಾಗಿ ಮುಂದಿನ ದಿನಗಳಲ್ಲಿ ಪಾವತಿಸಲು ಕ್ರಮಕೈಗೊಳ್ಳಲಾಗುವುದು. ಬೆಳಪು ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಅನುದಾನ ಬಿಡುಗಡೆ ಆದೇಶಗಳಲ್ಲಿ ದಾಖಲಿಸಿರುವ ಷರತ್ತುಗಳನ್ನು ಪಾಲನೆ ಮಾಡದಿರುವುದನ್ನು ವಿಶ್ಲೇಷಿಸಲು ವಿಶೇಷ ಸಿಂಡಿಕೇಟು ಸಭೆ ಕರೆಯಲು ನಿರ್ಣಯಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಹಣಕಾಸು:ಸಾ.ಸ.1:3 (2025)

ವಿಷಯ: ಸಪ್ಟೆಂಬರ್ 30, 2024 ರಂದು ಇದ್ದಂತೆ ಹಣಕಾಸು ವಹಿವಾಟುಗಳ ವರದಿ ನೀಡುವ ಬಗ್ಗೆ.

**ನಿರ್ಣಯ:** ಹಣಕಾಸು ವಹಿವಾಟುಗಳ ವರದಿಯನ್ನು ಸಭೆಗೆ ಮಂಡಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.1:4 (2025)

ವಿಷಯ: ಡಾ.ಎಸ್.ಬಿ.ಎಂ. ಪ್ರಸನ್ನ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : "ಮಂಗಳೂರು ವಿಶ್ವವಿದ್ಯಾನಿಲಯದ ಅತ್ಯಾಧುನಿಕ ವಿಜ್ಞಾನ ಸಂಶೋಧನಾ ಕೇಂದ್ರ, ಬೆಳಪು, ಕಾಪು, ಉಡುಪಿ ಜಿಲ್ಲೆ" ಇಲ್ಲಿ ಮುಂದಿನ ಸಿಂಡಿಕೇಟ್ ಸಭೆಯನ್ನು ನಡೆಸಲು ಅನುಕೂಲವಾಗುವಂತೆ ವಿಸ್ತೃತವಾಗಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ. ಏಕೆಂದರೆ, ದಿನಾಂಕ 02.09.2022ರ ಸಿಂಡಿಕೇಟ್ ಸಭೆಯ ನಂತರ ಯಾವುದೇ ಸಭೆಯು ಆ ಕೇಂದ್ರದಲ್ಲಿ ನಡೆದಿರುವುದಿಲ್ಲ. ಅದು ನಮ್ಮ ವಿಶ್ವವಿದ್ಯಾನಿಲಯದ ಒಂದು ಭಾಗವಾಗಿರುವುದರಿಂದ ನಾವು ಅಲ್ಲಿ ಸಿಂಡಿಕೇಟ್ ಸಭೆಯನ್ನು ನಡೆಸುವುದು ಒಂದು ವಿಶೇಷ ಸಂಗತಿಯಾಗಿರುತ್ತದೆ.

**ನಿರ್ಣಯ:** ಅತ್ಯಾಧುನಿಕ ವಿಜ್ಞಾನ ಸಂಶೋಧನಾ ಕೇಂದ್ರ, ಬೆಳಪು ಇಲ್ಲಿ ಮೂಲ ಸೌಕರ್ಯದ ಕೊರತೆ ಇರುವ ಕಾರಣ ಸಿಂಡಿಕೇಟು ಸಭೆಯನ್ನು ನಡೆಸುವ ಸಾಧ್ಯತೆಯನ್ನು ಪರಿಶೀಲಿಸಲಾಗುವುದು. ಅಂತೆಯೇ ಬೇಡಿಕೆ ಇರುವ 3 ಸ್ನಾತಕೋತ್ತರ ವಿಜ್ಞಾನ ಕಾರ್ಯಕ್ರಮಗಳನ್ನು ಸದ್ರಿ ಕೇಂದ್ರದಲ್ಲಿ ಪ್ರಾರಂಭಿಸುವ ನಿಟ್ಟಿನಲ್ಲಿ ಕ್ರಮವಹಿಸಲು, ಡೀನರ ತಂಡವನ್ನು ಪರಿಶೀಲಿಸಲು ಕಳುಹಿಸುತ್ತಿರುವುದಾಗಿ ಸಭೆಗೆ ತಿಳಿಸಲಾಯಿತು.

ವಿಷಯ 2 : ಎಲ್.ಐ.ಸಿ. ಸಮಿತಿ (ಸ್ಥಳೀಯ ವಿಚಾರಣಾ ಸಮಿತಿ)ಗೆ ಹಣಕಾಸು ವರ್ಷ 2022-23, 2023-2024, 2024-2025 ಆಗಿರುವ ಖರ್ಚು ವೆಚ್ಚಗಳ ಬಗ್ಗೆ ಸಿಂಡಿಕೇಟ್ ಸಭೆಗೆ ಮಂಡಿಸಿ ಚರ್ಚಿಸುವಂತೆ ಕೋರಿದೆ.

**ನಿರ್ಣಯ:** ಖರ್ಚು ವೆಚ್ಚಗಳ ವಿವರಗಳನ್ನು ಸಭೆಗೆ ಒದಗಿಸಲಾಯಿತು.

ವಿಷಯ 3 : Tally Software ಅನ್ನು ಈ ಹಿಂದೆ ಖರೀದಿ ಮಾಡಲಾಗಿತ್ತು ಎಂದು ಹಣಕಾಸು ಅಧಿಕಾರಿಗಳು ಹಿಂದಿನ ಸಭೆಯಲ್ಲಿ ತಿಳಿಸಿದ್ದಾರೆ. ಆದರೆ, ಇದುವರೆಗೂ ನಮಗೆ ಟ್ಯಾಲಿ ಸ್ಟೇಟ್‌ಮೆಂಟನ್ನು ಕೊಡದೇ ಇರುವ ಕಾರಣ ಹಾಗೂ ಟ್ಯಾಲಿಯನ್ನು ಸ್ಥಗಿತಗೊಳಿಸಿರುವ ಕಾರಣವನ್ನು ಹಣಕಾಸು ಅಧಿಕಾರಿಗಳು ಸಿಂಡಿಕೇಟ್ ಸಭೆಯಲ್ಲಿ ಪೂರ್ಣ ವರದಿಯೊಂದಿಗೆ ಚರ್ಚಿಸಬೇಕು.

**ನಿರ್ಣಯ:** ಈ ಹಿಂದೆ ಖರೀದಿಸಲಾಗಿದ್ದ Tally Software ಕೇವಲ ನಾಲ್ಕು ಮಂದಿ ಮಾತ್ರ ಉಪಯೋಗಿಸಲು ಸಾಧ್ಯವಾಗುತ್ತಿದ್ದು, ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಹಣಕಾಸು ವಹಿವಾಟುಗಳ ಟ್ಯಾಲಿ ಸ್ಟೇಟ್‌ಮೆಂಟನ್ನು ಒದಗಿಸಲು ಅಸಾಧ್ಯವಾಗಿರುತ್ತದೆ. ಪ್ರಸ್ತುತ ಖರೀದಿಸಿರುವ Tally Prime Software ನಲ್ಲಿ 30 ಮಂದಿ ಒಟ್ಟಿಗೆ ಬಳಸಲು ಹಾಗೂ Double Entry ಮಾಡಲು ಸಾಧ್ಯವಾಗುತ್ತದೆ ಎಂದು ಸಭೆಗೆ ತಿಳಿಸಲಾಯಿತು.

ವಿಷಯ 4 : ಕಳೆದ ಸಿಂಡಿಕೇಟ್ ಸಭೆಯಲ್ಲಿ ನಮಗೆ ಕೊಟ್ಟಿರುವ ನಿವೃತ್ತರ ಪಟ್ಟಿ (Pensioners List) ಅಪೂರ್ಣವಾಗಿದ್ದು, ಪೂರ್ಣ ಪ್ರಮಾಣದ ಒಂದು ನಿವೃತ್ತರ ಪಟ್ಟಿ (Pensioners List) ಸಭೆಗೆ ಒದಗಿಸಿಕೊಡುವುದು. ಏಕೆಂದರೆ, ನಮಗೆ ಕೊಟ್ಟಿರುವ ಪಟ್ಟಿಯಲ್ಲಿ ಕೇವಲ 45 ಹೆಸರುಗಳಿವೆ. ಅದರಲ್ಲಿ ನಮ್ಮ ಕುಲಪತಿಗಳ ಹೆಸರು ಸಹ ಬಿಟ್ಟು ಹೋಗಿರುತ್ತದೆ. ಹಾಗಾಗಿ ಪೂರ್ಣ ಪ್ರಮಾಣದ ಟೀಚಿಂಗ್ ಮತ್ತು ನಾನ್ ಟೀಚಿಂಗ್ ಪಟ್ಟಿಯನ್ನು ಸಿಂಡಿಕೇಟ್ ಸಭೆಗೆ ಒದಗಿಸುವುದು.

**ನಿರ್ಣಯ:** ನಿವೃತ್ತರ ಪಟ್ಟಿಯನ್ನು ಸಭೆಗೆ ಒದಗಿಸಲಾಯಿತು. ಕುಲಪತಿಯವರು ಕುಲಪತಿ ಹುದ್ದೆಯಿಂದ ನಿವೃತ್ತಿಯಾದ ನಂತರ ನಿವೃತ್ತರ ಪಟ್ಟಿಗೆ ಸೇರಿಸಲಾಗುವುದು ಎಂದು ಸಭೆಯ ಗಮನಕ್ಕೆ ತರಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಡಿಸಿ:ಸಾ.ಸ.1:5 (2025)

ವಿಷಯ: ತ್ರಿಶಾ ಕಾಲೇಜ್ ಆಫ್ ಕಾಮರ್ಸ್ ಆಂಡ್ ಮ್ಯಾನೇಜ್‌ಮೆಂಟ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಡಿಸಿ:ಸಾ.ಸ.1:6 (2025)

ವಿಷಯ: ತ್ರಿಶಾ ಸಂಧ್ಯಾ ಕಾಲೇಜು, ಕುದ್ರೋಳಿ, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಸಾ.ಸ.1:7 (2025)

ವಿಷಯ: ಎಸ್.ಸಿ.ಎಸ್. ಪ್ರಥಮ ದರ್ಜೆ ಕಾಲೇಜು, ಕೆಇಸಿಟಿ ಟವರ್ಸ್, ಅಶೋಕನಗರ, ಹೊಯ್ಗೆಬೈಲು, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಸಾ.ಸ.1:8 (2025)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ವಿಸ್ತರಣಾ ಸಂಯೋಜನೆ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಡಾ.ಎಸ್.ಬಿ.ಎಂ.ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ಕೆ. ರಘುರಾಜ್ ಮತ್ತು ಶ್ರೀ ಅಚ್ಚುತ ಗಟ್ಟಿ ಇವರುಗಳು ಸ್ಥಳೀಯ ಪರಿಶೀಲನಾ ಸಮಿತಿಯಲ್ಲಿ ಸಿಂಡಿಕೇಟು ಸದಸ್ಯರನ್ನು ಸೇರ್ಪಡೆಗೊಳಿಸದಿರುವುದರಿಂದ / ಪರಿಗಣಿಸದಿರುವುದರಿಂದ ಮತ್ತು ಸಿಂಡಿಕೇಟು ಸದಸ್ಯರ ಗಮನಕ್ಕೆ ತರದಿರುವುದರಿಂದ ಸ್ಥಳೀಯ ಪರಿಶೀಲನಾ ಸಮಿತಿಗಳ ಪೂರ್ಣ ವರದಿಗಳನ್ನು ಪರಿಶೀಲಿಸಲು ಕಾಲಾವಕಾಶ ಬೇಕಾಗಿರುವುದಾಗಿ KSU Act 2000 ರ (59) (A) ಪ್ರಕಾರ ಪತ್ರ ನೀಡಿರುತ್ತಾರೆ.

ಸರ್ಕಾರದ ಸೂಚನೆಯ ಪ್ರಕಾರ UUCMS ನಿಗದಿಪಡಿಸಿದ ದಿನಾಂಕದ ಅನುಸಾರ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ UUCMS ತಂತ್ರಾಂಶದಲ್ಲಿ Upload ಮಾಡಲು ಮಾನ್ಯ ಕುಲಪತಿಗಳು ನಿರ್ಧರಿಸಿದರು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಸಾ.ಸ.1:9 (2025)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ಮುಂದುವರಿಕೆ ಸಂಯೋಜನೆ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಡಾ.ಎಸ್.ಬಿ.ಎಂ.ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ಕೆ. ರಘುರಾಜ್ ಮತ್ತು ಶ್ರೀ ಅಚ್ಚುತ ಗಟ್ಟಿ ಇವರುಗಳು ಸ್ಥಳೀಯ ಪರಿಶೀಲನಾ ಸಮಿತಿಯಲ್ಲಿ ಸಿಂಡಿಕೇಟು ಸದಸ್ಯರನ್ನು ಸೇರ್ಪಡೆಗೊಳಿಸದಿರುವುದರಿಂದ / ಪರಿಗಣಿಸದಿರುವುದರಿಂದ ಮತ್ತು ಸಿಂಡಿಕೇಟು ಸದಸ್ಯರ ಗಮನಕ್ಕೆ ತರದಿರುವುದರಿಂದ ಸ್ಥಳೀಯ ಪರಿಶೀಲನಾ ಸಮಿತಿಗಳ ಪೂರ್ಣ ವರದಿಗಳನ್ನು ಪರಿಶೀಲಿಸಲು ಕಾಲಾವಕಾಶ ಬೇಕಾಗಿರುವುದಾಗಿ KSU Act 2000 ರ (59) (A) ಪ್ರಕಾರ ಪತ್ರ ನೀಡಿರುತ್ತಾರೆ.

ಸರ್ಕಾರದ ಸೂಚನೆಯ ಪ್ರಕಾರ UUCMS ನಿಗದಿಪಡಿಸಿದ ದಿನಾಂಕದ ಅನುಸಾರ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ UUCMS ತಂತ್ರಾಂಶದಲ್ಲಿ Upload ಮಾಡಲು ಮಾನ್ಯ ಕುಲಪತಿಗಳು ನಿರ್ಧರಿಸಿದರು.

**ಕಾರ್ಯಸೂಚಿ ಸಂಖ್ಯೆ:** ಸಿಡಿಸಿ:ಸಾ.ಸ.1:10 (2025)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ಹೊಸ ಶಾಶ್ವತ/ಶಾಶ್ವತ ಸಂಯೋಜನೆ ಮುಂದುವರಿಕೆ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಡಾ.ಎಸ್.ಬಿ.ಎಂ.ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ಕೆ. ರಘುರಾಜ್ ಮತ್ತು ಶ್ರೀ ಅಚ್ಚುತ ಗಟ್ಟಿ ಇವರುಗಳು ಸ್ಥಳೀಯ ಪರಿಶೀಲನಾ ಸಮಿತಿಯಲ್ಲಿ ಸಿಂಡಿಕೇಟು ಸದಸ್ಯರನ್ನು ಸೇರ್ಪಡೆಗೊಳಿಸದಿರುವುದರಿಂದ / ಪರಿಗಣಿಸದಿರುವುದರಿಂದ ಮತ್ತು ಸಿಂಡಿಕೇಟು ಸದಸ್ಯರ ಗಮನಕ್ಕೆ ತರದಿರುವುದರಿಂದ ಸ್ಥಳೀಯ ಪರಿಶೀಲನಾ ಸಮಿತಿಗಳ ಪೂರ್ಣ ವರದಿಗಳನ್ನು ಪರಿಶೀಲಿಸಲು ಕಾಲಾವಕಾಶ ಬೇಕಾಗಿರುವುದಾಗಿ KSU Act 2000 ರ (59) (A) ಪ್ರಕಾರ ಪತ್ರ ನೀಡಿರುತ್ತಾರೆ.

ಸರ್ಕಾರದ ಸೂಚನೆಯ ಪ್ರಕಾರ UUCMS ನಿಗದಿಪಡಿಸಿದ ದಿನಾಂಕದ ಅನುಸಾರ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ UUCMS ತಂತ್ರಾಂಶದಲ್ಲಿ Upload ಮಾಡಲು ಮಾನ್ಯ ಕುಲಪತಿಗಳು ನಿರ್ಧರಿಸಿದರು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.1:11 (2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಡಿಸೆಂಬರ್ 2024ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** IQAC, ವರದಿಯನ್ನು ಸಭೆಗೆ ಮಂಡಿಸಲಾಯಿತು. ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರು ಐ.ಕ್ಯೂ.ಎ.ಸಿ. ಸಲಹಾ ಸಮಿತಿಯ ಸದಸ್ಯರಾಗಿ ಭಾಗವಹಿಸಿದ್ದ ಸಭೆಯಲ್ಲಿ ತಾವು ಪಡೆದುಕೊಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಪ್ರೊ.ಪಿ.ಎಲ್.ಧರ್ಮ, ಇವರು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಐ.ಕ್ಯೂ.ಎ.ಸಿ.ಗೆ ಸಂಬಂಧಪಟ್ಟಂತೆ ತೆಗೆದುಕೊಂಡ ಕ್ರಮಗಳಿಂದಾಗಿ ಮಂಗಳೂರು ವಿಶ್ವವಿದ್ಯಾನಿಲಯವು ಶೈಕ್ಷಣಿಕವಾಗಿ ಮತ್ತು ಸಂಶೋಧನಾತ್ಮಕವಾಗಿ ಅತ್ಯುತ್ತಮ ಸಾಧನೆ ಮಾಡಲು ಹಾಗೂ ಅದನ್ನು ದಾಖಲಿಸಲು ಸಾಧ್ಯವಾಗಿದೆ ಎಂದರು. ಈ ನಿಟ್ಟಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯುವುದು ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿ ಐ.ಕ್ಯೂ.ಎ.ಸಿ. ನಿರ್ದೇಶಕರು ಮತ್ತು ಅವರ ತಂಡದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಸ್ತುತ

ತಯಾರಾಗಿರುವ AQAR ನ್ನು ಮುಂದಿನ ಕ್ರಮಕ್ಕೆ ಕಳುಹಿಸಿಕೊಡಲು ನಿರ್ಧರಿಸಲಾಯಿತು.

ಐ.ಕ್ಯೂ.ಎ.ಸಿ. ಸದಸ್ಯರಾಗಿ ಡಾ.ಕೆ.ಸಿ. ಮಹದೇಶರವರು ನೀಡಿರುವ ಉತ್ತಮ ಸಲಹೆ ಸೂಚನೆಗಳು ಮುಂದಿನ ನ್ಯಾಕ್ ಕಮಿಟಿ Accrediation ಸಂದರ್ಭದಲ್ಲಿ ಫಲ ನೀಡಲಿವೆ ಎಂದು ಮಾನ್ಯ ಕುಲಪತಿಗಳು ವಿಶ್ವಾಸ ವ್ಯಕ್ತಪಡಿಸಿದರು. ಇತ್ತೀಚೆಗೆ ತಮಿಳುನಾಡಿನ ವೆಲ್ಲೂರಿನಲ್ಲಿ ನಡೆದ ದಕ್ಷಿಣ ವಲಯ ಕುಲಪತಿಗಳ ಸಮಾವೇಶದಲ್ಲಿ, ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸಲಹೆಯಂತೆ ಹಣಕಾಸು ವಹಿವಾಟುಗಳನ್ನು ದಾಖಲಿಸಲು Double Entry System ಹಾಗೂ Internal Audit ವ್ಯವಸ್ಥೆಯನ್ನು ಜ್ಯಾರಿಗೊಳಿಸಿರುವುದನ್ನು ಉಲ್ಲೇಖಿಸಿರುವುದಾಗಿ ಸಭೆಗೆ ತಿಳಿಸಿದರು. ಮಂಗಳೂರು ವಿಶ್ವವಿದ್ಯಾನಿಲಯದ ಈ Best Practice ನ್ನು ಎಲ್ಲಾ ವಿಶ್ವವಿದ್ಯಾನಿಲಯಗಳು ಅಳವಡಿಸಿಕೊಳ್ಳಬೇಕೆಂದು ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘದ ಮಹಾ ಕಾರ್ಯದರ್ಶಿಯವರಾದ ಪ್ರೊ. ಪಂಕಜ್ ಮಿತ್ತಲ್ ಇವರು ಸಲಹೆ ನೀಡಿರುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು. ಈ ವ್ಯವಸ್ಥೆಯನ್ನು ಪ್ರಾರಂಭಿಸುವಂತೆ ಸಲಹೆ ನೀಡಿದ ಸಿಂಡಿಕೇಟು ಸದಸ್ಯರಿಗೆ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರು ಮಾತನಾಡಿ ಮಾನ್ಯ ಕುಲಪತಿಗಳಾದ ಪ್ರೊ.ಪಿ.ಎಲ್. ಧರ್ಮ ಇವರು ದಕ್ಷಿಣ ವಲಯದ ಕುಲಪತಿಗಳ ಸಮ್ಮೇಳನದಲ್ಲಿ ವಿಶ್ವವಿದ್ಯಾನಿಲಯದ ಘನತೆ ಹೆಚ್ಚಿಸುವ ಔಚಿತ್ಯಪೂರ್ಣ ಹಾಗೂ ವಿದ್ವತ್‌ಪೂರ್ಣ ಉಪನ್ಯಾಸ ನೀಡಿರುವ ವಿಚಾರವನ್ನು ಸಿಂಡಿಕೇಟು ಸಭೆಯ ಗಮನಕ್ಕೆ ತಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.1:12 (2025)

ವಿಷಯ: ಪದವಿ/ಸ್ನಾತಕೋತ್ತರ/ಸಂಯುಕ್ತ ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಗಳ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.1:13 (2025)

ವಿಷಯ: ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಗಳ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು:ಸಾ.ಸ.1:14 (2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಆಂತರಿಕ ಆಡಿಟ್ ಕಾರ್ಯ ನಡೆಸುವ ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:15 (2025)

ವಿಷಯ: ಸೈಂಟ್ ಆನ್ಸ್ ಕಾಲೇಜ್ ಆಫ್ ಎಜ್ಯುಕೇಶನ್ (ಸ್ವಾಯತ್ತ), ಮಂಗಳೂರು ವಿದ್ಯಾಸಂಸ್ಥೆಯಲ್ಲಿ ಶೈಕ್ಷಣಿಕ ವರ್ಷ 2024-25ನೇ ಸಾಲಿನಿಂದ ಸ್ನಾತಕ ಪದವಿಯಲ್ಲಿ Co-Education System ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.1:16 (2025)

ವಿಷಯ: ವಿವೇಕಾನಂದ ಕಾಲೇಜ್ ಆಫ್ ಆರ್ಟ್ಸ್, ಸೈನ್ಸ್ ಆಂಡ್ ಕಾಮರ್ಸ್, ಪುತ್ತೂರು ಇಲ್ಲಿ ಹೊಸ ಪದವಿ ಕಾರ್ಯಕ್ರಮಗಳಾದ ಬಿ.ಸಿ.ಎ. (ಆರ್ಟಿಫಿಷಲ್ ಇಂಟೆಲಿಜೆನ್ಸ್ ಆಂಡ್ ಮೆಷಿನ್ ಲರ್ನಿಂಗ್), ಬಿ.ಸಿ.ಎ. (ಡಾಟಾ ಅನಾಲಿಟಿಕ್ಸ್) ಮತ್ತು ಬಿ.ಎ./ಬಿ.ಎಸ್ಸಿ. ಕಾರ್ಯಕ್ರಮಗಳಲ್ಲಿ ಹೊಸ ಸಹಯೋಗಗಳನ್ನು ಪ್ರಾರಂಭಿಸಿರುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:17 (2025)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿರುವ ಪ್ರಯೋಗಾಲಯ ಸಹಾಯಕ ಹುದ್ದೆಗಳಿಂದ ಶೇಕಡ 30 ಹುದ್ದೆಗಳನ್ನು ಹಿರಿಯ ಪ್ರಯೋಗಾಲಯ ಸಹಾಯಕ ಹುದ್ದೆಯನ್ನಾಗಿ ಪರಿವರ್ತಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:18 (2025)

**ವಿಷಯ:** ಮುಖ್ಯ ಛಾಯಾಗ್ರಾಹಕ ಹುದ್ದೆಯ ಸೃಜನೆಗೆ ಸಂಬಂಧಿಸಿದ ಕರಡು ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.1:19 (2025)

**ವಿಷಯ:** ಶ್ರೀಮತಿ ಗೀತಾ ಕೆ., ಶೀಘ್ರಲಿಪಿಗಾರರು, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರ ಹುದ್ದೆಗೆ ಒಪ್ಪಂದದ ಆಧಾರದ ಮೇಲೆ ಮುಂದುವರಿಸುವ ಪ್ರಸ್ತಾವನೆಗೆ ವಿಶ್ವವಿದ್ಯಾನಿಲಯದ ಸಹಮತಿ ನೀಡುವ ಬಗ್ಗೆ.

**ನಿರ್ಣಯ:** ಒಪ್ಪಂದದ ಆಧಾರದ ಮೇಲೆ ಮುಂದುವರಿಸುವ ಪ್ರಸ್ತಾವನೆಗೆ ಮಾನ್ಯ ಸಿಂಡಿಕೇಟು ಸಹಮತಿ ವ್ಯಕ್ತಪಡಿಸಿತು.

**ಇತರೆ ವಿಷಯಗಳು:**

1) ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗದಲ್ಲಿ ಇನ್ನು ಮುಂದೆ ನಡೆಯುವ ಎಲ್ಲಾ ಸಭೆಗಳು ಕಡ್ಡಾಯವಾಗಿ ಕಲಾ ನಿಕಾಯದ ಡೀನರ ಉಪಸ್ಥಿತಿಯಲ್ಲಿಯೇ ನಡೆಸುವಂತೆ ಹಾಗೂ ಸಭೆಯ ನಡವಳಿಗಳನ್ನು ತಪ್ಪದೇ ಕುಲಸಚಿವರಿಗೆ ಸಲ್ಲಿಸಲು ಸೂಚಿಸುವಂತೆ ಸಿಂಡಿಕೇಟು ನಿರ್ಣಯಿಸಿತು. ಈ ಕುರಿತು ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗಕ್ಕೆ ನಿರ್ದೇಶನ ನೀಡುವಂತೆ ತೀರ್ಮಾನ ಕೈಗೊಳ್ಳಲಾಯಿತು.

2) ಶ್ರೀಮತಿ ನಾಗವೇಣಿ ಇವರ ಪಿಂಚಣಿಗೆ ಸಂಬಂಧಿಸಿ ಉಪಸಮಿತಿಯ ವರದಿಯಂತೆ ಶೇಕಡಾ ನೂರರಷ್ಟು ಮಾಸಿಕ ಪಿಂಚಣಿಯನ್ನು ತಕ್ಷಣ ಪಾವತಿಸಲು ಸಿಂಡಿಕೇಟು ನಿರ್ಣಯಿಸಿತು. ಇನ್ನುಳಿದಂತೆ ವರದಿಯಲ್ಲಿರುವ ಇತರ ಸಲಹೆಗಳಿಗೆ ಒಮ್ಮತ ಇಲ್ಲದಿರುವ ಕಾರಣ ಮುಂದಿನ ಸಮಿತಿ ಸಭೆಯಲ್ಲಿ ಕಾನೂನು ಅಭಿಪ್ರಾಯ ಪಡೆದು ನಿರ್ಣಯಿಸಲು ತೀರ್ಮಾನಿಸಲಾಯಿತು.

3) ವಿಶ್ವವಿದ್ಯಾನಿಲಯದಲ್ಲಿ ನಡೆಯಲಿರುವ ಈ ವರ್ಷದ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ನಿವೃತ್ತ Lt.Gen.(Retd).Dr.Prof.BNBM Prasad ಇವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸುತ್ತಿರುವುದಾಗಿ ತಿಳಿಸಲಾಯಿತು.

4) ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ಕೆ. ಇವರು ಮಾನವಿಕ ವಿಭಾಗದ ವಿಷಯಗಳಿಗೆ ಬೇಡಿಕೆ ಕಡಿಮೆಯಾಗುತ್ತಿರುವುದು ತೀವ್ರ ಆತಂಕದ ವಿಷಯವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಮಾನವಿಕ ವಿಷಯಗಳಲ್ಲಿ ಆಸಕ್ತಿ ಹುಟ್ಟಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯ ವತಿಯಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

ಸಹಿ/-
**ಕುಲಸಚಿವರು**

ಸಹಿ/-
**ಕುಲಪತಿಯವರು**